# ೧೨ ಆಲೆಮನೆಯಲ್ಲೊಂದು ದಿನ



ಅಂದು ಮಂಗಳವಾರ. ಆರನೆಯ ತರಗತಿಯ ವಿದ್ಯಾರ್ಥಿಗಳು ಕೈಯಲ್ಲಿ ಊಟದ ಡಬ್ಬಿ ಹಿಡಿದುಕೊಂಡು ಶಾಲೆಗೆ ಬಂದರು. ಅವರ ಸಂತೋಷಕ್ಕೆ ಮಿತಿಯೇ ಇರಲಿಲ್ಲ. ಎಂದಿನಂತೆ ಶಾಲೆಯಲ್ಲಿ ಎಲ್ಲರೂ ಕೂಡಿಕೊಂಡು ಪರಿಪಾಠ ಕಾರ್ಯಕ್ರಮ ಮುಗಿಸಿದರು. 'ಮಕ್ಕಳೇ, ಇಂದು ನಾವು ಆಲೆಮನೆ ನೋಡಲು ಸೋಮನ ಗೌಡರ ತೋಟಕ್ಕೆ ಹೋಗೋಣ', ಎಂದು ಗುರುಗಳು ಹೇಳಿದರು. ಹಾಗೆಯೇ' ದಾರಿಯಲ್ಲಿ ಎಲ್ಲರೂ ಶಿಸ್ತಿನಿಂದ ಹೋಗಬೇಕು. ಯಾರೂ ಜಗಳಾಡಬಾರದು, ಗದ್ದಲ ಮಾಡಬಾರದು. ತೋಟದಲ್ಲಿ ಅನುಚಿತವಾಗಿ ವರ್ತಿಸಬಾರದು. ಹಳ್ಳ ಮತ್ತು ಬಾವಿಯ ಕಡೆಗೆ ಹೋಗಬಾರದು. ಗಿಡಮರಗಳನ್ನು ಹತ್ತಬಾರದು. ಯಾವುದೇ ಕಾರಣಕ್ಕೂ ನಮ್ಮಿಂದಾಗಿ ತೋಟಿಗನ ಮನಸ್ಸಿಗೆ ನೋವಾಗಬಾರದು', ಎಂದು ಸೂಚನೆ ನೀಡಿದರು.

ಗುರುಗಳು ಹೇಳಿದಂತೆ ವರ್ಗದ ಎಲ್ಲ ಮಕ್ಕಳು ಕೂಡಿಕೊಂಡು ಇರುವೆಗಳಂತೆ ಸಾಲು-ಸಾಲಾಗಿ ಅತೀ ಶಿಸ್ತಿನಿಂದ ದಾರಿಯಲ್ಲಿ ನಡೆದರು. ದಾರಿಯಲ್ಲಿ ಬೇರೆ ಬೇರೆ ಪ್ರಕಾರದ ಪ್ರಾಣಿ, ಪಕ್ಷಿ, ಗಿಡಮರಗಳನ್ನು ನೋಡಿ ಆನಂದಪಟ್ಟರು. ಹಾಡುತ್ತ, ಜಯ ಘೋಷಗಳನ್ನು ಹೇಳುತ್ತ ತೋಟಕ್ಕೆ ಬಂದರು.

ಶಾಲೆಯ ಮಕ್ಕಳನ್ನು ಕಂಡು ಸೋಮನಗೌಡರು ಎದ್ದು ಬಂದು ಮಕ್ಕಳನ್ನು ಹಾಗೂ ಗುರುಗಳನ್ನು ಆದರದಿಂದ ಬರಮಾಡಿಕೊಂಡರು. ವಿಶಾಲವಾದ ಮಾವಿನ ಮರದ ಕೆಳಗೆ ಚಾಪೆಯನ್ನು ಹಾಸಿ ಅವರನ್ನು ಕೂಡ್ರಿಸಿದರು. ಗೌಡರು ಎಲ್ಲರಿಗೂ ಕಬ್ಬಿನ ಹಾಲು ಹಾಗೂ ತಿನ್ನಲು ಕೆನೆಬೆಲ್ಲವನ್ನು ಕೊಟ್ಟರು. ಮಕ್ಕಳೆಲ್ಲರು ಅದನ್ನು ಸೇವಿಸಿ ಖುಷಿಪಟ್ಟರು.

ಶಾರದಾ : ಗುರುಗಳೇ, ಈ ಬೆಲ್ಲ ಹೇಗೆ ತಯಾರಾಗುತ್ತದೆ ?

ಗುರುಗಳು : ಶಾರದಾ, ನಾವು ಇಲ್ಲಿಗೆ ಬಂದದ್ದು ಅದನ್ನೇ ತಿಳಿದುಕೊಳ್ಳಲು. ಈ ವಿಷಯವನ್ನು ಸ್ವತ: ಸೋಮನಗೌಡರೇ ನಿಮಗೆ ಹೇಳುತ್ತಾರೆ, ಕೇಳಿರಿ. ನಮಸ್ಕಾರ ಗೌಡರೇ, ದಯವಿಟ್ಟು ನಮ್ಮ ಮಕ್ಕಳಿಗೆ ಬೆಲ್ಲ ತಯಾರಾಗುವ ವಿಧಾನವನ್ನು ತಿಳಿಸಿರಿ.

ಸೋಮನಗೌಡರು : ನೀವೆಲ್ಲರೂ ಹೀಗೆ ಬನ್ನಿರಿ (ಗೌಡರು ಮಕ್ಕಳನ್ನು ಕರೆದುಕೊಂಡು ಆಲೆಮನೆ ಹತ್ತಿರ ಬಂದರು) ಅದೋ ನೋಡಿರಿ, ಅಲ್ಲಿ ಹಚ್ಚಹಸಿರಾದ ಗದ್ದೆ ಕಾಣುತ್ತಿದೆಯಲ್ಲ, ಅದು ಕಬ್ಬಿನ ಗದ್ದೆ. ಇಲ್ಲಿದೆಯಲ್ಲ ಕಬ್ಬು ಇದನ್ನು ಅಲ್ಲಿಂದಲೇ ತರಲಾಗಿದೆ.

ವಿಶಾಲ : ತಾತ ಅಲ್ಲಿ ಕಬ್ಬು ಹಚ್ಚ ಹಸಿರಾಗಿ ಕಾಣುತ್ತಿದೆಯಲ್ಲ ?

ಸೋಮನಗೌಡರು : ಹೌದು, ಅದನ್ನು ಕತ್ತರಿಸಿ, ಅದರ ತಪ್ಪಲು ತೆಗೆದು ಮುಂಭಾಗದ ಹಸಿರಾದ ವಾಡಿಯನ್ನು ಕಡಿದು ಇಲ್ಲಿಗೆ ತರುತ್ತೇವೆ. ಇದೋ ನೋಡಿ ಇದು ಕ್ರಶರ್. ಇದರಲ್ಲಿ ಎರಡು ಹರುಕುಬುರುಕಾದ ರೋಲರ್‌ಗಳಿವೆ. ರೋಲರ್‌ಗಳ ನಡುವೆ ಕಬ್ಬು ಬಂದಾಗ ಅದು ನುಜುಗಾಗುತ್ತದೆ. ಕಬ್ಬಿನಲ್ಲಿಯ ರಸವೆಲ್ಲ ಕೆಳಗೆ ಬೀಳುತ್ತದೆ. ಸಿಪ್ಪೆ ಮಾತ್ರ ಹೊರಗೆ ಬರುತ್ತದೆ. ರಸವು ಕೆಳಗಿನ ಹೌದಿನಲ್ಲಿ ಸಂಗ್ರಹವಾಗುತ್ತದೆ.

ಜಾನ : ಅಜ್ಜಾ, ಈ ರಸದಿಂದ ಏನು ಮಾಡುತ್ತಾರೆ ?

ಸೋಮನಗೌಡರು : ರಸವೆಲ್ಲ ಯಂತ್ರದ ಸಹಾಯದಿಂದ ಈ ಕಡಾಯಿಯಲ್ಲಿ ಹಾಕುತ್ತೇವೆ. ರಸವನ್ನು ಚೆನ್ನಾಗಿ ಕುದಿಸುತ್ತೇವೆ. ಆಗ ಇದು ಗಟ್ಟಿಯಾಗುತ್ತದೆ.

ಪರವಿನ : ಈ ರಸವು ಕಾಯ್ದು ಗಟ್ಟಿಯಾಗುತ್ತದೆಯೆ ಅಜ್ಜಾ ?

ಸೋಮನಗೌಡರು : ಹೌದು, ಈ ರಸವು ಕುದಿಯುತ್ತ, ಕುದಿಯುತ್ತ ಗಟ್ಟಿಯಾಗುತ್ತದೆ. ಗಟ್ಟಿಯಾಗುತ್ತಲೇ ಇದನ್ನು ಮಡಿಯಲ್ಲಿ ಹಾಕುತ್ತಾರೆ.

ಯುವರಾಜಸಿಂಗ : ಅಜ್ಜಾ, ಕೈ ಸುಡುವುದಿಲ್ಲವೇ ?

ಸೋಮನಗೌಡರು : ಹೌದು, ಅಪಾಯಕಾರಿ ಕೆಲಸ. ಇದನ್ನು ಬಹಳ ಜಾಗರೂಕತೆಯಿಂದ ಮಾಡುತ್ತಾರೆ. ಮಡಿಯಲ್ಲಿರುವಾಗ ರಸವು ಗಾಳಿಗೆ ತಣ್ಣಗಾಗುತ್ತ ಬರುತ್ತದೆ. ಆಗ ಇದರ ಮೇಲೆ ಕೆನೆ ಬರುತ್ತದೆ. ಇದಕ್ಕೆ ಕೆನೆಬೆಲ್ಲ ಅನ್ನುತ್ತಾರೆ.

ಐಶ್ವರ್ಯಾ : ಅಜ್ಜಾ, ಈ ಮೊದಲು ನಾವು ತಿಂದದ್ದು ಕೆನೆಬೆಲ್ಲವೇನು?

ಸೋಮನಗೌಡರು : ಹೌದು. ಕೆನೆಬೆಲ್ಲವೇ ಇತ್ತು. ನಂತರ ಇದನ್ನು ನಮಗೆ ಬೇಕಾದ ಆಕಾರದ ಅಚ್ಚುಗಳಲ್ಲಿ ತುಂಬುತ್ತೇವೆ. ಈ ರೀತಿ ಬೆಲ್ಲವು ತಯಾರಾಗುತ್ತದೆ.

ಜಾನ : ಅಜ್ಜಾ! ಇದು ಬಹಳ ಕಷ್ಟದ ಕೆಲಸ.

ಸೋಮನಗೌಡರು : ರೈತರು ಮಾಡುವ ಕೆಲಸಗಳೆಲ್ಲಾ ಬಹಳ ಕಷ್ಟದ ಕೆಲಸಗಳೇ ಆಗಿರುತ್ತವೆ. 'ಕೈಕೆಸರಾದರೆ ಬಾಯಿ ಮೊಸರು' ಎಂಬ ಗಾದೆ ಶ್ರಮದ ಮಹತ್ವವನ್ನು ತಿಳಿಸುತ್ತದೆ.

ಗುರುಗಳು : ಮಕ್ಕಳೇ, ಪ್ರತಿಯೊಬ್ಬರು ಕಷ್ಟಪಟ್ಟು ದುಡಿದರೆ ಮಾತ್ರ ಫಲ ಸಿಗುತ್ತದೆ.

ಸೋಮನಗೌಡರು : ನೀವು ಕೂಡಾ ಕಷ್ಟಪಟ್ಟು ಅಭ್ಯಾಸಮಾಡಿದರೆ ನಿಮಗೂ ನಿಮ್ಮ ಕೆಲಸದಲ್ಲಿ ಒಳ್ಳೆಯ ಫಲ ಸಿಗುತ್ತದೆ. ಈಗ ನಿಮಗೆಲ್ಲ ಬೆಲ್ಲ ತಯಾರಾಗುವ ವಿಧಾನ ತಿಳಿಯಿತೇ ?

ವಿನೋದ : ತಿಳಿಯಿತು, ಅಜ್ಜಾ. ಕಬ್ಬಿನಿಂದ ಬೆಲ್ಲ ತಯಾರಿಸುವ ಬಗ್ಗೆ ನಮಗೆ ತಿಳಿಯಿತು.

ಗುರುಗಳು : ಧನ್ಯವಾದಗಳು ಸೋಮನಗೌಡರೇ. ನಿಮ್ಮಿಂದ ತುಂಬ ಉಪಕಾರವಾಯಿತು. ನಾವಿನ್ನು ಹೋಗಿಬರುತ್ತೇವೆ. ನಮಸ್ಕಾರ.

ಸೋಮನಗೌಡರು : ನಮಸ್ಕಾರ ಗುರುಗಳೇ. ಎಲ್ಲರೂ ಕಬ್ಬು, ರಸ ಮತ್ತು ಬೆಲ್ಲ ನಿಮ್ಮ ನಿಮ್ಮ ಮನೆಗೂ ತೆಗೆದುಕೊಂಡು ಹೋಗಿರಿ.

ಗುರುಗಳು : ಆಗಲಿ ಗೌಡರೆ.

ಸಾಯಂಕಾಲದ ಸಮಯವಾಯಿತು. ಎಲ್ಲ ಮಕ್ಕಳು ತಲಾ ಒಂದೊಂದು ಕಬ್ಬನ್ನು ತೆಗೆದುಕೊಂಡರು. ಮತ್ತೆ ಸಾಲು ಸಾಲಾಗಿ ಅತೀ ಶಿಸ್ತಿನಿಂದ ಮರಳಿ ಮನೆಗೆ ಬಂದರು.

**ಶಬ್ದಗಳ ಅರ್ಥ**

ಆಲೆಮನೆ – ಬೆಲ್ಲ ತಯಾರಿಸುವ ಸ್ಥಳ; ಗದ್ದೆ – ತೋಟ; ಕ್ರಶರ್ – ಕಬ್ಬುನುರಿಸುವ ಯಂತ್ರ; ತಲಾ – ಪ್ರತಿಯೊಂದು

***ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.**

ಸೂಚನೆ __________ ; ವಿಧಾನ __________ ; ಜಾಗರೂಕತೆ __________

## ಅಭ್ಯಾಸ

**ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ದಾರಿಯಲ್ಲಿ ಯಾವ ರೀತಿ ಹೋಗಬೇಕೆಂದು ಗುರುಗಳು ಹೇಳಿದರು ?

______________________________

ಆ) ಮಕ್ಕಳು ದಾರಿಯಲ್ಲಿ ಏನೇನು ನೋಡಿದರು ?

______________________________

ಇ) ಗೌಡರು ಎಲ್ಲರಿಗೂ ಏನು ಕೊಟ್ಟರು ?

______________________________

**ಪ್ರಶ್ನೆ ೨) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಎರಡು ಪ್ರಶ್ನೆಗಳನ್ನು ರಚಿಸಿ ಉತ್ತರ ಬರೆಯಿರಿ.**

**ಅ)** ______________________

**ಉತ್ತರ** ______________________

**ಆ)** ______________________

**ಉತ್ತರ** ______________________

**ಪ್ರಶ್ನೆ ೩) ಕೆಳಗಿನ ಮಾತುಗಳನ್ನು ಯಾರು-ಯಾರಿಗೆ ಹೇಳಿದರು.**

ಅ) ಯಾವುದೇ ಕಾರಣಕ್ಕೂ ನಮ್ಮಿಂದ ತೋಟಿಗನ ಮನಸ್ಸಿಗೆ ನೋವಾಗಬಾರದು.

______________________________

ಆ) ಅಜ್ಜಾ, ಈ ರಸದಿಂದ ಏನು ಮಾಡುತ್ತಾರೆ ?

______________________________

ಇ) ಅಜ್ಜಾ, ಈ ಮೊದಲು ನಾವು ತಿಂದದ್ದು ಕೆನೆಬೆಲ್ಲವೇನು ?

ಈ) ರೈತರು ಮಾಡುವ ಕೆಲಸಗಳೆಲ್ಲ ಬಹಳ ಕಷ್ಟದ ಕೆಲಸಗಳೆ ?

ಉ) ಪ್ರತಿಯೊಬ್ಬರು ಕಷ್ಟಪಟ್ಟು ದುಡಿದರೆ ಮಾತ್ರ ಫಲ ಸಿಗುತ್ತದೆ.

**ಪ್ರಶ್ನೆ ೪) ಬಿಟ್ಟ ಸ್ಥಳಗಳನ್ನು ತುಂಬಿರಿ.**

ಅ) ಅವರ .................. ಮಿತಿಯೇ ಇರಲಿಲ್ಲ.

ಆ) .................. ಗಳಂತೆ ಸಾಲುಸಾಲಾಗಿ ಅತಿ ಶಿಸ್ತಿನಿಂದ ನಡೆದರು.

ಇ) ಮಕ್ಕಳೆಲ್ಲರೂ ಅದನ್ನು ಸೇವಿಸಿ ..................

ಈ) .................. ಬಾಯಿ ಮೊಸರು.

ಉ) ಈಗ ನಿಮಗೆಲ್ಲ .................. ತಯಾರಾಗುವ ವಿಧಾನ ತಿಳಿಯಿತೆ ?

**ಉಪಕ್ರಮ :** ಕೋಳಿಸಾಕಾಣಿಕೆ ಕೇಂದ್ರಕ್ಕೆ ಭೇಟಿ ನೀಡಿ ಆ ಕುರಿತು ಮಾಹಿತಿ ಸಂಗ್ರಹಿಸಿರಿ.

## ರೈತನೇ ರಾಷ್ಟ್ರದ ಬೆನ್ನೆಲುಬು



I13UC1